## ಸರಕಾರದವರು ವಶಪಡಿಸಿಕೊಂಡಿರುವ ಖಾಸಗಿ ಜಮೀನು

೮೬೧. ಶ್ರೀ ಪ್ರಭಾಕರ ರಾಣೆ (ಕಾರವಾರ). ಪ್ರಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಂವರೇ ?

ಅ) ಕಾರವಾರದಲ್ಲಿ ಸ್ಥಾಪಿತವಾಗಲಿರ ವ ನೌಕಾ ನೆಲೆಗೆ ಸರ್ಕಾರದವರು ವಶಪಡಿಸಿಕೊಂಡಿರುವ ಖಾಸಗಿ ಜಮೀನು ಹಾಗೂ ಸರ್ಕಾರಿ ಜಮೀನು ವಿಸ್ತೀರ್ಣ ಎಷ್ಟು.

ಆ) ಈ ಯೋಜನೆಯಿಂದ ನಿರ್ಮಿಸಲಾಗಿರುವ ಕುಟುಂಬಗಳ ಸಂಖ್ಯೆ ಎಷ್ಟು.

ಇ) ಪುನರ್ವಸತಿ ಪೆಚ್ಚ ಹಾಗೂ ಜನ ಕಳೆದುಕೊಳ್ಳುವ ಭೂಮಿ ಹಾಗೂ ಆಸ್ತಿ–ಪಾಸ್ತಿಗಳ ಪರಿಹಾರ ನೀಡಲು ಕೇಂದ್ರ ಸರ್ಕಾರ ನೀಡಿರುವ ಹಣವೆಷ್ಟು.

ಈ) ನಿರಾಶ್ರಿತರಾಗಲಿರುವ ಜನರಿಗೆ ಪುನರ್ವಸತಿ ಮಾಡಲು ಆಯ್ಕೆ ಮಾಡಿದ ಪ್ರದೇಶಗಳು ಯಾವುವು.

ಉ) ಸರಕಾರ ನೇಮಿಸಿರುವ ಪುನರ್ವಸತಿ ಸಮಿತಿಯಲ್ಲಿಯಂ ಅಧಿಕಾರೇತರ ಸದಸ್ಯರು ಎಷ್ಟು ಹಾಗೂ ಯಾರು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಸಚಿವರು).—

ಅ) ೧) ೨,೪೯೫ ಎಕರೆ ಖಾಸಗಿ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಭೂ ಸ್ವಾಧೀನ ಕಾಯ್ದೆ ಕಲಂ ೪(೧)ರ ಅಧಿಸೂಚನೆಯನ್ನು ಹೊರಡಿಸಿದೆ.

೨) ೪೪ ಎಕರೆ ೨೬ ಗುಂಟೆ ಸರ್ಕಾರಿ ಜಮೀನನ್ನು ನೌಕಾನೆಲೆಗೆ ವರ್ಗಾಯಿಸಲಾಗಿದೆ.

೩) ೫೫೭೫ ಎಕರೆ (೨೨೫೯ ಹೆಕ್ಟೇರ್ಸ್) ಅರಣ್ಯ ಜಮೀನನ್ನು ನೌಕಾ ನೆಲೆಗಾಗಿ ಬಿಡುಗಡೆ ಮಾಡುವ ಆದೇಶ ಹೊರಡಿಸಲಾಗಿದೆ.

೪) ೩೬–೦೧ ಎಕರೆ ಕೆ.ಐ.ಎ.ಡಿ.ಬಿ. ಗೆ ಸೇರಿದ ಜಮೀನನ್ನು ನೌಕಾನೆಲೆಗೆ ನೀಡಲಾಗಿದೆ.

ಆ) ಪ್ರಥಮ ಸರ್ವೆ ಮಾಡಿದ ಪ್ರಕಾರ ಒಟ್ಟು ೨೯೧೫ ಕುಟುಂಬಗಳು ನಿರಾಶ್ರಿತರಾಗುತ್ತಾರೆಂದು ಅಂದಾಜು ಮಾಡಲಾಗಿದೆ.

ಇ) ಮೇಲ್ಕಾಣಿಸಿದ ೨೯೧೫ ಕುಟುಂಬಗಳನ್ನು ಪುನರ್ವಸತಿ ಗೊಳಿಸಲು ಅಂದಾಜು ವೆಚ್ಚ ೭.೦೪ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿರುತ್ತದೆ.

ಭೂಮಿ ಹಾಗೂ ಆಸ್ತಿಪಾಸ್ತಿಗಳ ಅಂದಾಜು ಪರಿಹಾರದ ರೂ. ೧೯.೮೪ ಕೋಟಿಯಲ್ಲಿ ಶೇಕಡಾ ೮೦ ರಷ್ಟು ಹಣವನ್ನು ೧೫.೮೭ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿದ್ದಾರೆ.

ಈ) ನೌಕಾನೆಲೆಯಲ್ಲಿ ತೊಂದರೆಗಳೊಗಾಗುವ ಕುಟುಂಬಗಳ ಪುನರ್ವಸತಿ ಸಲುವಾಗಿ ರಚಿಸಿದ ಪುನರ್ವಸತಿ ಸಮಿತಿಯು ಕಾರವಾರ ತಾಲ್ಲೂಕಿನ ಮಾಜಾಳಿ ಗ್ರಾಮಂ ಹಾಗೂ ಕುಮಂಟಾ ತಾಲ್ಲೂಕಿನ ತದಡಿ ಮತ್ತು ಮಾದನಗೇರಿ ಗ್ರಾಮಗಳಲ್ಲಿ ಸ್ಥಳವನ್ನು ಗುರುತಿಸಿ, ಶಿಫಾರಸ್ಸು ಮಾಡಿರುತ್ತಾರೆ. ಆದರೆ ಈ ಸ್ಥಳಗಳು ಅರಣ್ಯ ಜಮೀನುಗಳಾಗಿರುವುದರಿಂದ ಕೇಂದ್ರ ಸರ್ಕಾರದ ಒಪ್ಪಿಗೆಯೊಂದಿಗೆ ಮುಂದಿನ ಕ್ರಮ ತೆಗೆದುಕೊಳ್ಳುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ೧೨ ಸದಸ್ಯರು ಪಟ್ಟಿ ಲಗತ್ತಿಸಿದೆ.

ಸರಕಾರ ನೇಮಿಸಿರುವ ಪುನರ್ವಸತಿ ಸಮಿತಿಯಲ್ಲಿಯಂ ಅಧಿಕಾರೇತರ ಸದಸ್ಯರ ಪಟ್ಟಿ.

೧ ಶ್ರೀ ದೇವರಾಯನಾಯ್ಕ, ಎಂ.ಪಿ, ಸಿಸಿ.
೨ ಶ್ರೀ ಆರ್.ಎಸ್. ನಾಯ್ಕ ರಾಜ್ಯ ಸಭಾ ಸದಸ್ಯರು, ದಾಂಡೇಲಿ, ಉತ್ತರ ಕನ್ನಡ.

೩ ಶ್ರೀ ಪಿ.ಎಸ್. ರಾಣೆ, ವಿಧಾನ ಸಭಾ ಸದಸ್ಯರು, ಕಾರವಾರ.
೪ ಶ್ರೀ ಅಜ್ಜೀಬಾಳ ಜಿ.ಎಸ್. ಹೆಗಡೆ, ವಿಧಾನ ಸಭಾ ಸದಸ್ಯರು, ಅಂಕೋಲಾ.
೫ ಶ್ರೀ ಎನ್.ಎಚ್. ಗೌಡಾ, ಎಂ.ಎಲ್.ಎ. ಕುವಟಾ.
೬ ಶ್ರೀ ಎಮ್.ಟಿ. ನಾಯ್ಕ ಅಧ್ಯಕ್ಷ, ನಗರ ಯೋಜನೆ, ಕಾರವಾರ.
೭ ಶ್ರೀ ಎಸ್.ಪಿ. ಕಾಮತ್, ವಕೀಲ, ಕಾರವಾರ.
೮ ಶ್ರೀ ಸಿ.ಡಿ. ಕೃಷ್ಣಾಪೂರ, ಕಾರವಾರ.
೯ ಶ್ರೀ ರಮಾನಂದ ನಾಯ್ಕ ತಾಲೂಕಾ ಜನತಾ ಪಕ್ಷದ ಅಧ್ಯಕ್ಷರು, ಅಂಕೋಲಾ.
೧೦ ಶ್ರೀ ಕಮಲಾಕರ ಗೋಕರ್ಣ, ಉಪಾಧ್ಯಕ್ಷರು, ಜನತಾ ಪಕ್ಷ, ಕಾರವಾರ.
೧೧ ಶ್ರೀ ಪಿ. ಎಮ್. ತಾಂಡೇಲ, ಬಿಣಗಾ, ಕಾರವಾರ.
೧೨ ಶ್ರೀ ಕೆ.ಕೆ. ನಾಯ್ಕ, ಭಾವಿಕೇರಿ, ಅಂಕೋಲಾ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಹದಿನಾರನೆಯ ಪಟ್ಟಿಯಲ್ಲಿರ ವ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಮಂಡಿಸಲಾಯಿತು.

ಮುಜರಾಯಿ ಇಲಾಖೆಯಿಂದ ಹಣ ಬಿಡುಗಡೆ ಬಗ್ಗೆ.

೬೧೭. ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಜರಾಯಿ ಇಲಾಖೆಯಿಂದ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಹಣ ಬಿಡುಗಡೆ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಅದನ್ನು ಯಾವ ನಿಯಮದ ಪೇರೆಗೆ ಬಿಡುಗಡೆ ಮಾಡಲಾಯಿತು.

ಇ) ತೇಗೂರು ಮಂದಿರದ ಜೀರ್ಣೋದ್ಧಾರಕ್ಕೆ ಒಂದು ಲಕ್ಷ ಹತ್ತು ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿ, ಹಣ ಬಿಡುಗಡೆ ಮಾಡದಿರಲು ಕಾರಣವೇನು, ಹಾಗೂ ಇದರ ಬಗ್ಗೆ ಅನೇಕ ಮನವಿ ಕಳಿಸಿದರೂ ಸಹ ಕ್ರಮ ಕೈಗೊಳ್ಳದಿರಲು ಕಾರಣಗಳೇನು.

ಈ) ಸದರಿ ಮಂದಿರದ ಜೀರ್ಣೋದ್ಧಾರಕ್ಕೆ ಬೇಗನೆ ಹಣ ಬಿಡುಗಡೆ ನೀಡಲಾಗುವುದೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಬಂದಿದೆ.

ಆ) ಈ ಬಗ್ಗೆ ನಿಯಮ ರೂಪಿಸಿಲ್ಲ.

ಇ) ತೇಗೂರು ದೇವಸ್ಥಾನಕ್ಕೆ ಜೀರ್ಣೋದ್ಧಾರಕ್ಕೆ ಸರ್ಕಾರದ ವತಿಯಿಂದ ೧೯೮೪–೮೫ನೇ ಸಾಲಿನಲ್ಲಿ ೧೫,೦೦೦–೦೦ ರೂಪಾಯಿಗಳ ಧನ ಸಹಾಯ ಬಿಡುಗಡೆ ಮಾಡಿರುತ್ತದೆ. ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಂದ ಉಳಿದ ೯೫,೦೦೦–೦೦ ರೂ.ಗಳ ಧನ ಸಹಾಯವನ್ನು ಮಂಜೂರು ಮಾಡುವಂತೆ ಕೋರಿ ಪ್ರಸ್ತಾವನೆ ಕಳಿಸಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ,

ಈ) ಈ ವಿಷಯದ ಬಗ್ಗೆ ಅಂತಿಮ ತೀರ್ಮಾನವನ್ನು ಸದ್ಯದಲ್ಲೆ ತೆಗೆದುಕೊಳ್ಳಲಾಗುವುದು.